**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ ಚನ್ನರಾಯಪಟ್ಟಣ**

**ಸಿಸಿ ಸಂಖ್ಯೆ 826/2024** **CW**–1 **PW**–1

**ಸಾಕ್ಷಿಯನ್ನು ದಿಃ 05.03.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

| | |
|---|---|
| ಹೆಸರುಃ | ಗೌರಮ್ಮ |
| ಗಂಡನ ಹೆಸರುಃ | ನಂಜುಂಡೇಗೌಡ |
| ವಯಸ್ಸುಃ | 67 ವರ್ಷ |
| ವೃತ್ತಿಃ | ಗೃಹಿಣಿ |
| ವಾಸ ಸ್ಥಳಃ | ಗೌಡಗೆರೆ ಗ್ರಾಮ |

**ಮುಖ್ಯವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ಚಾಸಾ–2 ನನ್ನ ಮೊಮ್ಮಗ. ಚಾಸಾ–3 ನನ್ನ ಗಂಡ.

ಸುಮಾರು 1 ವರೆ ವರ್ಷದ ಹಿಂದೆ ರಾತ್ರಿ 8.30 ರ ಸಮಯದಲ್ಲಿ 1ನೇ ಆರೋಪಿ ವೈರನ್ನು ಕಿತ್ತು ಹಾಕಿದ್ದು, ಅದನ್ನು ನಾನು ಪ್ರಶ್ನಿಸಿದಾಗ 1 ರಿಂದ 3ನೇ ಆರೋಪಿತರು ಅವಾಚ್ಯ ಶಬ್ದಗಳಿಂದ ಬೈದು ಕೈಯಿಂದ ಹೊಡೆದಿರುತ್ತಾರೆ. ಅಷ್ಟರಲ್ಲಿ ಆರೋಪಿ 4 ರಿಂದ 6 ರವರು ಸ್ಥಳಕ್ಕೆ ಬಂದು ಅವಾಚ್ಯ ಶಬ್ದಗಳಿಂದ ಬೈದು ಸೀರೆಯನ್ನು ಹಿಡಿದು ಎಳೆದಾಡಿ 5ನೇ ಆರೋಪಿ ಕೈಯಿಂದ ಹೊಡೆದು 4ನೇ ಆರೋಪಿ ನನ್ನ ಬಲಕೈ ಗೆ ಹೊಡೆದಿರುತ್ತಾರೆ. ಗಲಾಟೆಯಲ್ಲಿ ನಾನು ಧರಿಸಿದ್ದ ಓಲೆ ಮತ್ತು ಮಾಟಿ ಕಳುವಾಗಿರುತ್ತದೆ. ನನಗೆ ಪ್ರಜ್ಞೆ ತಪ್ಪಿದ್ದು ಆಸ್ಪತ್ರೆಯಲ್ಲಿ ಪ್ರಜ್ಞೆ ಬಂದಿರುತ್ತದೆ. ಆಸ್ಪತ್ರೆಯಲ್ಲಿ ನನ್ನಿಂದ ಪೋಲೀಸರು ಹೇಳಿಕೆ ದೂರನ್ನು ಪಡೆದಿರುತ್ತಾರೆ.

ಸಾಕ್ಷಿಗೆ ದೂರನ್ನು ತೋರಿಸಲಾಗಿ, ಸಾಕ್ಷಿಯು ಅದನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ–1 ಎಂದು ಗುರುತಿಸಲಾಯಿತು. ನಿಪಿ–1 ಕ್ಕೆ ಹೆಬ್ಬೆಟ್ಟಿನ ಗುರುತನ್ನು ಹಾಕಿರುತ್ತಾರೆ.

ಸಾಕ್ಷಿ ನ್ಯಾಯಾಲಯದಲ್ಲಿರುವ ಮಚ್ಚನ್ನು ನೋಡಿ ಗುರುತಿಸಿದ್ದು ಅದನ್ನು ಮು ಮಾ – 1 ಎಂದು ಗುರುತಿಸಲಾಯಿತು.

ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ನ್ಯಾಯಾಲಯದಲ್ಲಿರುವ 1, 2, 4 ರಿಂದ 6ನೇ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ.

(3ನೇ ಆರೋಪಿ ಗೈರು ಹಾಜರಿದ್ದು 3ನೇ ಆರೋಪಿ ಪರ ವಕೀಲರು ಆರೋಪಿಯನ್ನು ಗುರುತಿಸುವ ಬಗ್ಗೆ ತಕರಾರು ಇಲ್ಲ ಎಂದು ನಿವೇದಿಸಿಕೊಂಡಿರುತ್ತಾರೆ).

**(ಈ ಹಂತದಲ್ಲಿ ಮಾನ್ಯ ಎಪಿಪಿಯವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)**

**ಪಾಟೀ ಸವಾಲುಃ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

1 ಮತ್ತು 2ನೇ ಆರೋಪಿತರು ತಂಗಿನ ಎಡಮಟ್ಟೆಯಿಂದ ನನ್ನ ಮೈ ಕೈ ಮೇಲೆ ಹೊಡೆದಿರುತ್ತಾರೆ ಎಂದರೆ ಸರಿ. 3ನೇ ಆರೋಪಿ ನನ್ನನ್ನು ತಬ್ಬಿ ಹಿಡಿದುಕೊಂಡಿದ್ದರು ಎಂದರೆ ಸರಿ. 5 ಮತ್ತು 6ನೇ ಆರೋಪಿತರು ಇವರನ್ನು ಕೊಲೆ ಮಾಡದೇ ಬಿಡಬೇಡಿ ಎಂದು ಕೈಯಿಂದ ಮೈ ಕೈ ಮೇಲೆ ಹೊಡೆದು ಕೆಳಕ್ಕೆ ಹಾಕಿ ತುಳಿದಿರುತ್ತಾರೆ ಎಂದರೆ ಸರಿ. ಚಾಸಾ–2 ರವರು ಸ್ಥಳಕ್ಕೆ ಬಂದು ನನ್ನನ್ನು ಆಸ್ಪತ್ರೆಗೆ ಸೇರಿಸಿರುತ್ತಾರೆ ಎಂದರೆ ಸರಿ.

ಎಡಮಟ್ಟೆಯಿಂದಲೇ ನನ್ನನ್ನು ಹೊಡೆದಿರುತ್ತಾರೆ ಎಂದರರೆ ಸರಿ. ಎಡಮಟ್ಟೆಯನ್ನು ಮು ಮಾ –2 ಎಂದು ಗುರುತಿಸಲಾಯಿತು.

**ಆರೋಪಿ ಪರ ವಕೀಲರು ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಗಿದೆ).**

**ಓ ಹೇ ಕೇ ಸರಿ ಇದೆ.**

**(ಕುಸುಮ ವಿ.)**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ., ಚನ್ನರಾಯಪಟ್ಟಣ.**